# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ. ಕೆ. ಎ. ತಿಪ್ಪೇಸ್ವಾಮಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1059

ಉತ್ತರಿಸಬೇಕಾದ ದಿನಾಂಕ : 21.09.2021

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (Reserve Bank of India) ನಿಯಂತ್ರಣಕ್ಕೆ ಒಳಪಡುವ ಸಹಕಾರ ಸಂಸ್ಥೆಗಳು ಯಾವುವು? | ಬ್ಯಾಂಕಿಂಗ್ ರೆಗ್ಯುಲೇಷನ್ ಅಧಿನಿಯಮ 1949 ರಡಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪರವಾನಗಿ ಪಡೆದು ಬ್ಯಾಂಕಿಂಗ್ ಚಟುವಟಿಕೆಗಳನ್ನು ಕೈಗೊಳ್ಳುತ್ತಿರುವ ಸಹಕಾರ ಬ್ಯಾಂಕುಗಳು ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಂತ್ರಣಕ್ಕೆ ಬರುತ್ತವೆ. |
| ಆ | ಈ ಸಹಕಾರ ಸಂಸ್ಥೆಗಳ ಕಾರ್ಯವೈಖರಿಯ ನಿಯಂತ್ರಣವನ್ನು ರಾಜ್ಯ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ಗಳು ಯಾವ ರೀತಿ ನಿಭಾಯಿಸುತ್ತವೆ? (ಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಸಹಕಾರ ಸಂಘಗಳ ಅಧಿಯಮ 1959 ರಡಿ ನೋಂದಣಿಯಾದ ಸಹಕಾರ ಬ್ಯಾಂಕುಗಳು ಆ ಅಧಿನಿಯಮದ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುತ್ತವೆ.<br><br>ಕರ್ನಾಟಕ ಸೌಹಾರ್ದ ಸಹಕಾರಿಗಳ ಅಧಿನಿಯಮ 1997 ರಡಿಯಲ್ಲಿ ನೋಂದಣಿಗೊಂಡ ಸೌಹಾರ್ದ ಸಹಕಾರ ಬ್ಯಾಂಕುಗಳು ಸದರಿ ಅಧಿನಿಯಮದ ಪರಿಧಿಯೊಳಗೆ ಕಾರ್ಯನಿರ್ವಹಿಸುತ್ತವೆ. ಈ ಅಧಿನಿಯಮಗಳಲ್ಲಿ ಸಂಬಂಧಿಸಿದ ಪ್ರಾಧಿಕಾರಕ್ಕೆ ಅಧಿಕಾರವನ್ನು ಪ್ರದತ್ತಗೊಳಸಲಾಗಿದೆ. ಅದರನ್ವಯ ಸರ್ಕಾರವು ಸಹಕಾರಿ ಬ್ಯಾಂಕುಗಳ ಮೇಲೆ ನಿಯಂತ್ರಣ ಹೊಂದಿರುತ್ತದೆ.<br><br>ಬ್ಯಾಂಕಿಂಗ್ ರೆಗ್ಯುಲೇಷನ್ ಅಧಿನಿಯಮ 1949 ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ 1934 ಈ ಎರಡೂ ಅಧಿನಿಯಮಗಳ ಅವಕಾಶಗಳನ್ವಯ ದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಭಾರತೀಯ ರಿಸರ್ವ್ ಬ್ಯಾಂಕ್ ಈ ಸಹಕಾರ ಬ್ಯಾಂಕುಗಳನ್ನು ನಿಭಾಯಿಸುತ್ತದೆ.<br><br>ಸಹಕಾರ ಬ್ಯಾಂಕುಗಳು ರಾಜ್ಯ ಸಹಕಾರ ಕಾಯ್ದೆಗಳಡಿ ನೋಂದಣಿಯಾಗಿ RBI ಪರವಾನಗಿ ಪಡೆದು ಕಾರ್ಯನಿರ್ವಹಿಸುತ್ತಿದ್ದು, ಆಡಳಿತಾತ್ಮಕ ವಿಷಯಗಳಿಗೆ ಸರ್ಕಾರ ಮತ್ತು ಬ್ಯಾಂಕಿಂಗ್ ವ್ಯವಹಾರಗಳಿಗೆ ಸಂಬಂಧಿಸಿದಂತೆ RBI ಕಾಯ್ದೆಗನುಗುಣವಾಗಿ ಜಂಟಿ ನಿಯಂತ್ರಣ (Dual control)ಕ್ಕೊಳಪಟ್ಟು ಕಾರ್ಯನಿರ್ವಹಿಸುತ್ತವೆ. |
| ಇ | (Reserve Bank of India) ದೊಂದಿಗೆ ರಾಜ್ಯ ಸರ್ಕಾರ ಮಾಡಿಕೊಂಡಿರುವ ಒಡಂಬಡಿಕೆ ಪತ್ರಗಳ ಸಾರಾಂಶವೇನು? | ರಾಜ್ಯ ಸರ್ಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ಕಾನೂನಿನ ಪ್ರಕಾರ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುತ್ತವೆ.<br>ಆದರೆ, ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಂಬಂಧಪಟ್ಟಂತೆ ದಿ:02-09-2005 ರಂದು ರಾಜ್ಯ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ನಡುವೆ ದ್ವಿಪಕ್ಷೀಯ ಒಪ್ಪಂದವೇರ್ಪಟ್ಟಿದೆ (ಮಾಹಿತಿ **ಅನುಬಂಧದಲ್ಲಿ** ನೀಡಲಾಗಿದೆ.)<br><br>ಈ ಒಪ್ಪಂದದ ಪ್ರಕಾರ State Level Task Force for Urban Co-operative Banks (TAFCUB) ಸಮಿತಿ ರಚನೆಯಾಗಿದೆ. ಈ ಸಮಿತಿಯಲ್ಲಿ ಶಕ್ತ ಪಟ್ಟಣ ಸಹಕಾರ ಬ್ಯಾಂಕುಗಳಾಗಿ ಮುಂದುವರೆಯಲು ಹಾಗೂ ದುರ್ಬಲ ಪಟ್ಟಣ ಸಹಕಾರ ಬ್ಯಾಂಕುಗಳನ್ನು ಸಶಕ್ತಗೊಳಸಲು ಕಾರ್ಯ ಯೋಜನೆಯನ್ನು ರೂಪಿಸುವುದು. ಬ್ಯಾಂಕಿಂಗ್ ಲೈಸೆನ್ಸ್ ನೀಡುವ ಹಾಗೂ ತಿರಸ್ಕರಿಸುವ ಸಂದರ್ಭದಲ್ಲಿ ಸಹಕಾರ ಸಂಘಗಳ ನಿಬಂಧಕರೊಂದಿಗೆ ಸಮಾಲೋಚಿಸುವುದು, ಮಾನವ ಸಂಪನ್ಮೂಲ ಅಭಿವೃದ್ಧಿ, ಮಾಹಿತಿ ತಂತ್ರಜ್ಞಾನ ಜಾರಿಗೆ ಕ್ರಮಕೈಗೊಳ್ಳುವ ಬಗ್ಗೆ ನಿರ್ಧರಿಸುವ ಅಧಿಕಾರವನ್ನೊಂದಿದೆ. |

| | | |
|---|---|---|
| ಈ | ಈ ಸಹಕಾರ ಸಂಸ್ಥೆಗಳನ್ನು ನಿಯಂತ್ರಣಗೊಳಸಲು ಬಳಸುತ್ತಿರುವ ಕಾಯಿದೆಗಳು ಯಾವುವು? ಮತ್ತು ರಾಜ್ಯ ಸರ್ಕಾರದ ಪಾತ್ರವೆಷ್ಟು? ಈ ಒಡಂಬಡಿಕೆ ಪತ್ರದಲ್ಲಿ ಒಳಗೊಂಡಿರುವ ಸಹಕಾರ ಸಂಸ್ಥೆಗಳ ಆಡಳತ ಮಂಡಳಗಳನ್ನು ರದ್ದುಗೊಳಸಿ (Supersede) ಆಡಳತಾಧಿಕಾರಿಗಳನ್ನು ನೇಮಿಸಲು (Reserve Bank of India) ಸಹಮತಿ ಅಗತ್ಯವೇ? (ಪೂರ್ಣ ಮಾಹಿತಿ ನೀಡುವುದು) | ಈ ಸಹಕಾರ ಸಂಸ್ಥೆಗಳನ್ನು ನಿಯಂತ್ರಣಗೊಳಸಲು ಪ್ರಮುಖವಾಗಿ ಕೆಳಕಂಡ ಕಾಯಿದೆಗಳನ್ನು ಸಂದರ್ಭಾನುಸಾರ ಬಳಸಲಾಗುತ್ತದೆ.<br>1. ಕರ್ನಾಟಕ ಸಹಕಾರ ಸಂಘಗಳ ಅಧಿಯಮ 1959<br>2. ಕರ್ನಾಟಕ ಸೌಹಾರ್ದ ಸಹಕಾರಿಗಳ ಅಧಿನಿಯಮ 1997<br>3. ಬ್ಯಾಂಕಿಂಗ್ ರೆಗ್ಯುಲೇಷನ್ ಅಧಿನಿಯಮ 1949<br>4. ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ 1934<br>5. ಅನ್ವಯಿಸಬಹುದಾದಇತರೆ ಕಾನೂನುಗಳು<br><br>ಒಡಂಬಡಿಕೆ ಪತ್ರದ ಪ್ರಕಾರ ಬ್ಯಾಂಕುಗಳ ಆಡಳತ ಮಂಡಳಗಳನ್ನು ರದ್ದುಪಡಿಸುವ ಪ್ರಸಂಗವಿರುವುದಿಲ್ಲ.<br>ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರಡಿ ನೋಂದಣಿಯಾದ ಪಟ್ಟಣ ಸಹಕಾರ ಬ್ಯಾಂಕುಗಳು ಆ ಅಧಿನಿಯಮದ ಪ್ರಕರಣ 30(6) ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿಯಲ್ಲಿ ನೋಂದಣಿಯಾದ ಸೌಹಾರ್ದ ಸಹಕಾರಿ ಬ್ಯಾಂಕುಗಳು ಆ ಅಧಿನಿಯಮದ ಪ್ರಕರಣ 38(6)ರ ಪ್ರಕಾರ ಆಡಳತ ಮಂಡಳ ರದ್ದತಿ ಸಂದರ್ಭದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ನ ಪೂರ್ವಾನುಮತಿ ಅಗತ್ಯವಿರುತ್ತದೆ. |
| ಉ | ರಾಜ್ಯ ಸರ್ಕಾರ ಮತ್ತು (Reserve Bank of India) ಒಪ್ಪಂದದ ಪ್ರಕಾರ ಎಷ್ಟು ಸಹಕಾರ ಸಂಸ್ಥೆಗಳನ್ನು ವಿಲೀನಗೊಳಸಲು ಕ್ರಮವಹಿಸಲಾಗಿದೆ? ಮತ್ತು ಈ ಪ್ರಕ್ರಿಯೆ ಯಾವ ಯಾವ ಹಂತದಲ್ಲಿವೆ? (ಪೂರ್ಣ ಮಾಹಿತಿ ನೀಡುವುದು) | ರಾಜ್ಯ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಒಪ್ಪಂದದ ಪ್ರಕಾರ ಸಹಕಾರ ಬ್ಯಾಂಕುಗಳನ್ನು ವಿಲೀನಗೊಳಸಲು ಕ್ರಮಕೈಗೊಂಡಿರುವುದಿಲ್ಲ.<br>ಆದರೆ, ಆಯಾ ಬ್ಯಾಂಕುಗಳು ವಿಲೀನಕ್ಕೆ ಸಂಬಂಧಪಟ್ಟಂತೆ ಸಲ್ಲಿಸಿದ ಪ್ರಸ್ತಾವನೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿಗೆ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ. ವಿವರಗಳು ಈ ಕೆಳಕಂಡಂತಿವೆ.<br>1. ಮುಧೋಳ ಸಹಕಾರ ಬ್ಯಾಂಕ್ ನಿ., ಮುಧೋಳ ಈ ಬ್ಯಾಂಕ್ ವೀರಶೈವ ಸಹಕಾರ ಬ್ಯಾಂಕ್ ನಿ.,ಕೊಲ್ಲಾಪುರ, ಮಹಾರಾಷ್ಟ್ರ ಇದರೊಂದಿಗೆ ವಿಲೀನ.<br>2. ಬೀದರ್ ಮಹಿಳಾ ಅರ್ಬನ್ ಕೋ- ಆಪರೇಟಿವ್ ಬ್ಯಾಂಕ್ ನಿ., ಬೀದರ್, ವಿಕಾಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,, ಹೊಸಪೇಟೆ ಇದರೊಂದಿಗೆ ವಿಲೀನ.<br>3. ಅಕ್ಕಮಹಾದೇವಿ ಮಹಿಳಾ ಸಹಕಾರಿ ಬ್ಯಾಂಕ್ ನಿ,. ಬೆಳಗಾವಿ, ಡಾ. ಅಪ್ಪಾ ಸಾಹೇಬ್ ಉರುಫ್ ಸಾರೇ ಪಾಟೀಲ್, ಜಯಸಿಂಗ್‌ಪುರ, ಉಡಗಾವ್ ಸಹಕಾರಿ ಬ್ಯಾಂಕ್ ನಿ., ಇದರೊಂದಿಗೆ ವಿಲೀನ.<br>4. ಶ್ರೀ ಶರಣ ಬಸವೇಶ್ವರ ಪಟ್ಟಣ ಸಹಕಾರ ಬ್ಯಾಂಕ್ ನಿ.,ಕಾರಟಗಿ, ಕೊಪ್ಪಳ ಜಿಲ್ಲೆ, ಸುಕೊ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ ಇದರೊಂದಿಗೆ ವಿಲೀನ.<br><br>ಮೇಲಿನ ಪ್ರಸ್ತಾವನೆಗಳು ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಬಾಕಿ ಉಳದಿವೆ. |

**ಕಡತ ಸಂಖ್ಯೆ ಸಿಓ 85 ಸಿಆರ್‌ಸಿ 2021**

**(ಎಸ್. ಟಿ. ಸೋಮಶೇಖರ್)**
ಸಹಕಾರ ಸಚಿವರು

Government of Karnataka
Registration & Stamps Department

BD/2 No. 1371026
Issued by
State Bank of Mysore

Certified that a sum of Rs. 100/- (Rupees One Hundred only) has been paid towards Karnataka Stamp duty by
Sri/Smt. Regional Director RBI & Ors
S/d/w/o ——————— residing at ———————

For State Bank of Mysore
MANAGER
Lady Curzon Road Branch
Bangalore-1

STATE BANK OF MYSORE
Lady Curzon Road Branch
BANGALORE-1

Authorised Agent to collect stamp duty on behalf of Government of Karnataka

Sr. Name:
Date: 02 SEP 2005

## MEMORANDUM OF UNDERSTANDING

THIS MEMORANDUM OF UNDERSTANDING made and entered into at Bangalore on this Fifth day of September 2005 between Government of the State of Karnataka represented by the Principal Secretary, Karnataka Government Secretariat, Co-operation Department, having office at Multistoreyed Building, II Stage, VI Floor, Bangalore - 560 001 (hereinafter referred to as 'the State') and the Reserve Bank of India having its Central Office at Shahid Bhagat Singh Marg, Post Box No. 406, Mumbai - 400 001 (hereinafter referred to as 'Bank').

Whereas the State Government administers the Karnataka State Cooperative Societies Act, 1959 and Karnataka Souharda Sahakari Act, 1997 and the Bank is the regulator of Urban Co-operative Banks (UCBs) under the Banking Regulation Act, 1949 (as applicable to co-operative societies), the State Government and the Bank exercise regulatory powers over UCBs concurrently.

And whereas co-ordination between the State and the Bank is essential for deciding the future set up of UCBs and facilitating proper measures for their development into strong and vibrant entities.

It has, therefore, been decided to enter into a Memorandum of Understanding (MOU) between the State and the Bank as under:

Government of Karnataka
Registration & Stamps Department

BD/2 No. 1371027
Issued by
State Bank of Mysore

Certified that a sum of Rs. 100/- (Rupees One Hundred only) has been paid towards Karnataka Stamp duty by

Sri/Smt. Regional Director RBI, B'lore

s/d/w/o residing at

STATE BANK OF MYSORE
Lady Curzon Road Branch
BANGALORE-1

Br Name:
Date: 2 SEP 2005

Authorised Agent to collect stamp duty on behalf of Government of Karnataka

1. The Bank undertakes -

a) to constitute a State Level Task Force for Urban Co-operative Banks (TAFCUB), comprising the Regional Director of the Bank, Registrar of Cooperative Societies (RCS) of the State, representative of Central Office of Urban Banks Department of the Bank, representative of the State Government and a representative each from the State and National Federation of UCBs for identification and drawing up of a time bound action plan for the revival of potentially viable UCBs and non-disruptive exit for non-viable UCBs.

b) to facilitate human resources development and IT initiatives in UCBs.

2. The State Government undertakes:

(a) to introduce long form audit report for statutory audit and modify audit rating models in alignment with the gradation system adopted by the Bank for all UCBs and provide for statutory audit by Chartered Accountants (CAs) appointed by Director of Co-operative Audit in consultation with the Bank for UCBs with deposit over Rs.25 crores and special audit by CAs, if required by the Bank, for any UCB.

(b) to put in place fit and proper criteria for the CEO, based on guidelines of the Bank.

3. The Bank and State Government agree that the Regional Director of the Bank for Karnataka and the RCS of the State (RCS) shall enter into a MoU stipulating the broad measures to be taken by the parties for implementing the recommendations of the TAFCUB. The MoU shall, inter alia, provide for:

(i) Consultation by the Bank with the RCS before cancelling or refusing licence under BR Act of a UCB covered by the MoU;

(ii) The RCS complying without delay, any requisition by the Bank for supercession of the Board or for winding up of any UCB.

4. Where the terms and conditions of MOU are not complied with, it shall be open to the parties hereto, notwithstanding what is stated hereinabove, to take such measures as are available to them under the relevant statutes.

In witness whereof the parties hereto have signed this Memorandum of Understanding at the place and the date mentioned hereinabove.

For and on behalf of the
Government of Karnataka

A. Ramaswamy
Principal Secretary
Karnataka Government Secretariat
Co-operation Department
Multistoreyed Building, II Stage, VI Floor
Bangalore - 560 001

For and on behalf of the
Reserve Bank of India

A. V. Sardesai
Executive Director
Reserve Bank of India
Central Office
Shahid Bhagat Singh Marg
Mumbai - 400 001

Witness - 1:

K.H. Gopalakrishna Gowda
Registrar of Co-operative Societies
in Karnataka
#1, Ali Askar Road
Bangalore 560-052.

Witness - 2:

Devaki Muthukrishnan
Regional Director for Karnataka
Reserve Bank of India
10/3/08, Nrupathunga Road
Bangalore 560-001.